ಶ್ರೀ ಡಿ. ಮಂಜುನಾಥ್ : ಇನ್ನು ಮುಂದೆ ಪಾರ್ಟಿಕ್ಲೆ ಲೆಕ್ಕರರ್ರ ಅನ್ನು ಅಪಾಯಿಂಟ್ ಮಾಡಿಕೊಳ್ಳುವ ಪ್ರಶ್ನೆಯು ಬರುವುದಿಲ್ಲ. ಮಾನ್ಯ ಸದಸ್ಯರು ಬ್ಯಾಕಲಾಗ್ ಹುದ್ದೆ ಬಗ್ಗೆ ಹೇಳಿದರು, ಆ ಹುದ್ದೆಗಳನ್ನು ಲೆಕ್ಕ ಹಾಕಿ, ಎಷ್ಟು ಪೋಸ್ಟ್ ಇವೆ ಎನ್ನುವುದನ್ನು ನೋಡಿ ಬಿಟ್ಟು ಅದನ್ನು ಪೀರಿಪ್ ರಿಕ್ರೂಟ್‌ಮೆಂಟ್ ಮಾಡಿಯಾಕು ಎಂದು ತೀರ್ಮಾನ ಮಾಡಿದ್ದೇವೆ. ಅದೇ ತರಹ ಕಾಲೇಜುಗಳಲ್ಲಿ ನೋಟ್ ಹಾಕಿ ಅಲ್ಲಿ ಅದು ತೀರ್ಮಾನವಾಗಿದೆ.

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರೇ, ಸರ್ಕಾರ ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅರೆಕಾಲಿಕ ಉಪನ್ಯಾಸಕರ ಮಾಹಿತಿಯನ್ನು ತರಿಸಿಕೊಳ್ಳುವಾಗ 2 ರಿಂದ 7 ವರ್ಷದವರೆಗೂ ಅನೇಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅದರ ಪ್ರಾರಂಭಾಲರು ಕನಿಷ್ಠ ಒಂದು ವರ್ಷ ಎನ್ನುವ ಮಾಹಿತಿಯನ್ನು ಕಳುಹಿಸಿದ್ದಾರೆ. ಕಳುಹಿಸಿಕೊಟ್ಟಮೇಲೆ ಮಾಹಿತಿ ತಪ್ಪಾಗಿದೆ ಎಂದು ಹೇಳಿದ್ದಾರೆ, ದಯವಿಟ್ಟು ಆ ಒಂದು ಮಾಹಿತಿ ತಪ್ಪಾಗಿದ್ದರೆ ವಿಚಾರ ಮಾಡಿ ಅದನ್ನು ಸರಿ ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ : ಅದನ್ನು ಸರಿ ಮಾಡುತ್ತೇನೆ. ಏಕೆಂದರೆ ನಾವು ತೀರ್ಮಾನ ಮಾಡಿದಮೇಲೆ ವಿಚಾರಿಸಿದಾಗ ಅನೇಕ ಕಡೆ ಅನೇಕ ಪ್ರಾಂಶುಪಾಲರು ಮತ್ತೆ ಎಲ್ಲಾ ಕಡೆಯಿಂದ ಕಳುಹಿಸುವುದಕ್ಕೆ ಪ್ರಾರಂಭ ಮಾಡಿದರು. ಹಾಗೂ ನನಗೆ ಆರ್ಜಿಯನ್ನು ಕೊಟ್ಟರು. ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ನನ್ನನ್ನು ಸಹ ಅನೇಕ ಜನ ಬಂದು ಭೇಟಿ ಮಾಡಿದರು. ನನ್ನ ಹೆಸರು ಬಿಟ್ಟು ಹೋಗಿದೆ ಹೇಳಿದರು ಎಂದು ಆಲ್ಲಿ ಯಾರೋ ಆಫೀಸರ್ ಇದ್ದಾರೆ, ಅವರು ಆಫೀಸರ್ರ ಹೌದೋ ಅಲ್ಲವೋ, ಅವರು ಬಹಳ ದುರಹಂಕಾರ ಮಾಡುತ್ತಿದ್ದಾರೆ ಎಂದು ಕೇಳಿಬರುತ್ತಿದೆ. ಆಲ್ಲಿ ಸುಮ್ಮನೆ ಹೀರೆ ಯಾರಾದರೂ ಬಂದು ಕುಳಿತುಕೊಳ್ಳುತ್ತಾರೋ ಏನೋ. ಯಾರೋ ನನ್ನ ಹೆಸರೇ ಇಟ್ಟುಕೊಂಡಿರುವ ಹಾಗೆ ಇದೆ.

ಶ್ರೀ ಡಿ. ಮಂಜುನಾಥ್ : ಇಲ್ಲ ಅದನ್ನು ಸರಿ ಮಾಡಿಸುತ್ತೇವೆ.

ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು

154 - ಶ್ರೀ ಬಿ.ಪಿ. ಲಿಪಪ್ಪ (ಸಕಲೇಶಪುರ) : ಮಾನ್ಯ ಪಾರ್ಟಾ ಮತ್ತು ಪ್ರವಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಎಷ್ಟು ವೈದ್ಯರುಗಳ ಕೊರತೆ ಇದೆ. ಇದನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

(ಅ) ಒಟ್ಟು ಎಷ್ಟು ಮಾಂಜಿಯಾದ ಮತ್ತು ಗ್ರೂಪ್-ಡಿ ನೌಕರರ ಕೊರತೆ ಇದ ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

(ಆ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳ ಆಸ್ಪತ್ರೆಗಳಿಗೆ ಕಳೆದ ವರ್ಷ ಸರಬರಾಜುಗೊಂಡಿರುವ ಔಷಧಿಗಳ ವಿವರ ಎಷ್ಟು. ಪ್ರಸ್ತುತ ಈ ತಾಲೂಕಿನಲ್ಲಿ ಎಷ್ಟು ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

(ಇ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳ ಆಸ್ಪತ್ರೆಗಳಲ್ಲಿ ಎಷ್ಟು ಮಹಿಳಾ ವೈದ್ಯರುಗಳ ಮುದ್ರೆ ಬಾಕಿ ಇದೆ. ಇದನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ. ಸಿ. ಮಾಧುಸ್ವಾಮಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಪರವಾಗಿ ಶ್ರೀ ಎಂ. ಸಿ. ನಾಣಯ್ಯ (ಹಾರ್ಡ್ ಮತ್ತು ಪ್ರವಾಸೋದ್ಯಮ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

(ಅ)	ತಾಲ್ಲೂಕು	ಸಾರ್ವಜನಿಕ ಆಸ್ಪತ್ರೆ	ಪ್ರಾಥಮಿಕ ಆರೋಗ್ಯ ಕೇಂದ್ರ	ಪ್ರಾಥಮಿಕ ಆರೋಗ್ಯ ಘಟಕ
	ಸಕಲೇಶಪುರ	1	8	5
	ಆಲೂರು	-	4	2

ಸಕಲೇಶಪುರ ತಾಲ್ಲೂಕಿನಲ್ಲಿ 8 ವೈದ್ಯರು 3 ಮಹಿಳಾ ವೈದ್ಯರು ಮತ್ತು ಆಲೂರು ತಾಲ್ಲೂಕಿನಲ್ಲಿ 1 ಮಹಿಳಾ ವೈದ್ಯರ ಮುದ್ರೆ ಬಾಕಿ ಇದೆ.

ಕರ್ನಾಟಕ ಲೋಕಸೇವಾ ಆಯೋಗದಿಂದ ಅರ್ಜಿಗಳನ್ನು ಆಹ್ವಾನಿಸಿ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಹಾಗೂ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

(ಆ)	ಸಕಲೇಶಪುರ	ಆಲೂರು
ಮಾಂಜಿಯರು	9	2
ಎಂ.ಬಿ.ಬಿ.ಎಂ.	8	2
ಗ್ರೂಪ್ ಡಿ	36	11

ಈ ಮುದ್ರೆಗಳಿಗೆ ನೇಮಕಾತಿಗಾಗಿ ಆಧ್ಯರ್ಥಿಗಳ ಆಯ್ಕೆ ಪಟ್ಟಿ ಸಿದ್ಧವಾಗಿದ್ದು ನೇಮಕಾತಿ ಸಮಿತಿಯಲ್ಲಿ ಮಂಜೂರಾದ ಬಾಕಿ ಮುದ್ರೆಗಳನ್ನು ಆಧ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ[illegible]ತ ಆಸ್ಪತ್ರೆಗಳಿಗೆ 94-95ನೇ ಸಾಲಿಗೆ ರೂ. 3,07,183-73ಗಳ ಮೊತ್ತದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ. ಪ್ರಸ್ತುತ ವರ್ಷದಲ್ಲಿ ಫೆಬ್ರವರಿ 96ರ ಅಂತ್ಯದವರಿಗೆ ರೂ. 4,30,710ಗಳ ಮೊತ್ತದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

ಆಲೂರು ತಾಲ್ಲೂಕಿನ ಆಸ್ಪತ್ರೆಗಳಿಗೆ 94-95ನೇ ಸಾಲಿಗೆ ರೂ. 1,58,567-05ಗಳ ಮೊತ್ತದ ಔಷಧಿಯನ್ನು ಸರಬರಾಜು ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ಫೆಬ್ರವರಿ 96ರ ಅಂತ್ಯದವರೆಗೆ ರೂ. 1,28,398-98ಗಳ ಮೊತ್ತದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

ಈ) ಪ್ರಶ್ನೆ 'ಅ' ರಲ್ಲಿ ಉತ್ತರ ವಿವರಿಸಿದೆ.

ಶ್ರೀ ಜಿ. ಬಿ. ವಿಜಯ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಒಟ್ಟು ಸಕಲೇಶಪುರ ತಾಲ್ಲೂಕಿನಲ್ಲಿ ಮತ್ತು ಆಲೂರಿನಲ್ಲಿ 8 ವೈದ್ಯರು ಹಾಗೂ 4 ಮಹಿಳಾ ವೈದ್ಯರ ಹುದ್ದೆ ಖಾಲಿಯಿದೆ ಎಂದು ಹೇಳಿ ಉತ್ತರ ಕೊಟ್ಟಿದ್ದಾರೆ. ಯಾವಾಗ ಸ್ಥಳಗಳಲ್ಲಿ ಡಾಕ್ಟರ್ ಗಳು ಇಲ್ಲ ಎಂದು ಕೊಡಬೇಕು. ಹಾಗೂ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕಾತಿ ಮಾಡಲು ಕ್ರಮ ತಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಏನು ಕ್ರಮ ತಗೆದುಕೊಂಡಿದ್ದಾರೆ? ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿದ್ದಾರೆ ಇಲ್ಲವೇ? ಮಾಡಿದ್ದರೆ ಎಲ್ಲಿ ಮಾಡಿದ್ದಾರೆ? ಮಾಡಿಯರು ಹಾಗೂ ಗ್ರೂಪ್ 'ಡಿ' ನೌಕರರ ಹುದ್ದೆಗಳಲ್ಲಿ 9 ಮಾಡಿಯರು ಹಾಗೂ 8 ಎಂ.ಎಸ್.ಐ. ಹುದ್ದೆಗಳು, ಗ್ರೂಪ್ 'ಡಿ' ಯಲ್ಲಿ 36 ಹುದ್ದೆಗಳು, ಹಾಗೂ ಆಲೂರಿನಲ್ಲಿ 11, 2.2 ಹುದ್ದೆಗಳು ಅಲ್ಲಿನ ಆಸ್ಪತ್ರೆಗೆ ಅತ್ಯಾವಶ್ಯಕವಾಗಿರತಕ್ಕಂತ ಹುದ್ದೆ. ಅದಕ್ಕೆ ಪಟ್ಟಿ ಸಿದ್ಧವಾಗಿದೆ, ಸಮಯಕ್ಕೆ ಕಾದಿದೆ ಎಂದು ತಿಳಿಸಿದ್ದಾರೆ. ಏಂದರೆ ಯಾವ ಸಮಯಕ್ಕಾಗಿ ಕಾದಿದ್ದಾರೆ ಗೊತ್ತಾಗಲಿಲ್ಲ. ಅಲ್ಲಿ ಖಾಲಿ ಇರತಕ್ಕಂಥ ಹುದ್ದೆಗಳನ್ನು ತಕ್ಷಣ ಅವಶ್ಯಕತೆ ಇರುವಂತಹ ಆಸ್ಪತ್ರೆಗೆ ಬೇಕಾಗಿರತಕ್ಕಂಥ ಭರ್ತಿ ಮಾಡಬೇಕಾಗಿರತಕ್ಕಂಥ ಹುದ್ದೆಗಳು. ಇವನ್ನು ಯಾವಾಗ ಭರ್ತಿ ಮಾಡುತ್ತೀರಿ? ಏಕೆಂದರೆ ತಮ್ಮಲ್ಲಿ ಪಟ್ಟಿ ಸಿದ್ಧವಾಗಿದೆ. ಮತ್ತು ಔಷಧಿಗಳ ಸರಬರಾಜಿಗೆ ಹಣವನ್ನು ತೋರಿಸಿದ್ದರೆ ಆದರೆ ಆಸ್ಪತ್ರೆಯಲ್ಲಿ ಔಷಧಿ ಇಲ್ಲ ಎಂದು ರೋಗಿಗಳಿಗೆ ಉತ್ತರ ಸಿಗುತ್ತದೆ. ಏಂದರೆ ಔಷಧ ಸರಬರಾಜು ಆಗುತ್ತಿರುವುದು ಕಡಿಮೆಯೇ ಅಥವಾ ಔಷಧ ವಿತರಣೆ ಮಾಡತಕ್ಕಂಥ ಜಾಗದಲ್ಲಿ ಏನಾದರೂ ಕೊರತೆ ಏನ್ನುವುದನ್ನು ಸರ್ಕಾರ ಸ್ಥೂಲ ಗಮನಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪಾಣಿಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಯಾವಾಗ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಹುದ್ದೆಗಳು ಖಾಲಿ ಇವೆ ಎಂದು ಕೇಳಿದ್ದಾರೆ, ಆದರೆ ೪ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಾಹಿತಿ ಈಗ ಇಲ್ಲ. ಆದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹುದ್ದೆ ಖಾಲಿ ಇರುವುದನ್ನು ತುಂಬುವುದಕ್ಕೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವುದಕ್ಕೆ ಕಳೆದ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರತಕ್ಕಂತ ೨ ಜನ ವೈದ್ಯರು ಮುಂದಾಗಲಿಲ್ಲ. ಹಾಗಾಗಿ ೪ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆಗಿಲ್ಲ. ಪುನಃ ಖಾಲಿ ಇರುವಂಥ ಸಂದರ್ಭದಲ್ಲಿ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕ ಮಾಡುವುದ

ಕಾರ್ಯಕ್ರಮವನ್ನು ಸರ್ಕಾರ ಈಗಾಗಲೇ ಪರಿಶೀಲಿಸುತ್ತಿದೆ. ಆ ಕುರಿತಾಗಿ ಮಾತುಕತೆಗಳನ್ನು ನಡೆಸಿದೆ. ಈಗ ತಾಲ್ಲೂಕು ಆಸ್ಪತ್ರೆಗಳಲ್ಲಿ ಇರುವ ಹಾಗೂ ಇರತಕ್ಕಂಥ ಈ ವೈದ್ಯರುಗಳನ್ನು ನಗರಕ್ಕೆ ಆದ್ಯತೆಯ ಮೇರೆ ಮಾಡಿರತಕ್ಕಂಥ ವೈದ್ಯರುಗಳನ್ನು ಅಲ್ಲಿಗೆ ನಿಯೋಜನೆ ಮಾಡುವುದಕ್ಕೆ ಬರುವುದಿಲ್ಲ. ಕಾರಣ ಆಸ್ಪತ್ರೆಗಳಿಗೆ ಅವರನ್ನು ನಿಯೋಜನೆ ಮಾಡಬೇಕಾಗಿದೆ. ಅಮೃತಪುರದಲ್ಲಿ 400 ಜನ ವೈದ್ಯರುಗಳು ನೇಮಕಾತಿ ಪ್ರಕ್ರಿಯೆ ಕೆ.ಪಿ.ಎಸ್.ಸಿಯಲ್ಲಿ ಪ್ರಾರಂಭವಾಗಿದೆ. ಆ ಪ್ರಕ್ರಿಯೆ ಪ್ರಾರಂಭವಾಗುವುದರ ಸಾಮಾ ಆ ಕುರಿತಾಗಿ ಮಾತುಕತೆಗಳನ್ನು ಕೈಗೊಳ್ಳುತ್ತೇವೆ ಮತ್ತು ಅವಶ್ಯಕತೆಯಾನುಸಾರ ಈ ತಾಲ್ಲೂಕು ಆಸ್ಪತ್ರೆಗಳಲ್ಲಿ ಇರತಕ್ಕಂಥ ಔಷಧಿಗಳ ಪೂರೈಕೆ ಬಗ್ಗೆ ಹೇಳುವುದಾದರೆ 1994-95, 1995-96ನೇ ಸಾಲಿನಲ್ಲಿ ಕರ್ನಾಟಕ ಮತ್ತು ಕೇಂದ್ರ ಈ ಎರಡು ಆಸ್ಪತ್ರೆಗಳಿಗೆ 1994-95ನೇ ಸಾಲಿನಲ್ಲಿ ಎಷ್ಟು ಹಣವನ್ನು ನೀಡಿದೆ ಮಾಡಿತ್ತು, ಆದೇ ಹಣವನ್ನು 1995-96ನೇ ಸಾಲಿಗೂ ಹಣವನ್ನು ನೀಡಿದೆ ಮಾಡಿದ್ದೇವೆ. ಆದರೆ 1995-96ನೇ ಸಾಲಿಗೆ 1994-95ನೇ ಸಾಲಿನಲ್ಲಿ ನೀಡಿದೆ ಮಾಡಿದ್ದಕ್ಕಿಂತ ಹೆಚ್ಚು ಹಣವನ್ನು ಈ ಬಾರಿ ಒದಗಿಸಿದ್ದೇವೆ. ಏಕೆಂದರೆ ಅಲ್ಲಿ ಔಷಧಿಗಳ ಕೊರತೆ ಹೆಚ್ಚಾಗಿರುವುದರಿಂದ, ಅವರೂ ಮಾನ್ಯ ಸದಸ್ಯರು ಇದನ್ನು ಕೊರತೆ ಇದೆ ಎಂದು ಹೇಳಿದ್ದಾರೆ. ಇದನ್ನು ತುಂಬುವುದಕ್ಕೆ ಸರ್ಕಾರ ಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ಎಸ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಗ್ರೂಪ್ 'ಡಿ' ನೌಕರರ ಮತ್ತು ಮಾದಿಯರ ನೇಮಕಾತಿ ಬಗ್ಗೆ ಅರೋಗ್ಯ ಇಲಾಖೆ ಈಗಾಗಲೇ ಸಂದರ್ಶನ ಮಾಡಿ ಲೇಟ್ ಕೂಡ ತಯಾರು ಮಾಡಿದೆ. ಆದರೆ ಡಿ.ಪಿ.ಎ.ಆರ್. ಕಮಲಿಯಂದ ಅದು ತಡೆಯಾಗಿದೆ. ಈ ರೀತಿ ಪಾಸ್ ಮಾಡಿರುವುದನ್ನು ತಗೆಯಬಹುದಾ? ಈ ರೀತಿ ಮಾಡಿದರೆ ನಾವೇ ರಾಜ್ಯದ ಎಲ್ಲಾ ಕಡೆಗೂ ಕೊರತೆ ಇರುವಲ್ಲಿ ಇದನ್ನು ತುಂಬಿದರೆ ಒಳ್ಳೆಯದಾಗುತ್ತದೆ.

ಶ್ರೀ ವಿ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಮಾದಿಯರು ಮತ್ತು ಪಿ.ಎಸ್.ಐ.ಗೆ ಸಂಬಂಧಪಟ್ಟ ಹಾಗೆ ಸಂದರ್ಶನ ಪ್ರಕ್ರಿಯೆ ಮುಗಿದು ಪಟ್ಟಿ ತಯಾರಾಗಿದೆ. ಅದನ್ನು ಡಿ.ಪಿ.ಎ.ಆರ್.ಗೆ ನಿಯಮಗಳಿಗನುಗುಣವಾಗಿ ಮಾಡುವುದಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆ ಎಂದು ಕಾರ್ಯಕ್ರಮ ಇನ್ನು 15 ದಿವಸದಲ್ಲಿ ಮುಗಿಯುತ್ತದೆ. ಮಾದಿಯರು ಮತ್ತು ಪಿ.ಎಸ್.ಐಂಗಳನ್ನು ನೇಮಕ ಮಾಡಿಕೊಳ್ಳುವಂತಹ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಇನ್ನು ಗ್ರೂಪ್'ಡಿ' ನೌಕರರ ಬಗ್ಗೆ ಹೇಳುವುದಾದರೆ ತಮಗೆ ಏಕಾಏಕಿ ಮೆಜರಿ ಗೊತ್ತಿದೆ. ಗ್ರೂಪ್ 'ಡಿ' ನೌಕರರ ಬಗ್ಗೆ ಕಾರ್ಯಕ್ರಮವನ್ನು ಪರಿಶೀಲಿಸುವುದಕ್ಕೆ ಈಗಾಗಲೇ ಆರೋಗ್ಯ ಇಲಾಖೆಗೆ ಇದನ್ನು ತಿಳಿಸಲಾಗಿದೆ ಎಂದು ಹೇಳಿ ಇದರ ಬಗ್ಗೆಯೂ ಕೂಡ ಸರ್ಕಾರ ಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಸಕಲೇಶಪುರದಲ್ಲಿ ಎಂದು ಒಳ್ಳೆಯ ಆಸ್ಪತ್ರೆ ಇಮಾರತಿ ಇದನ್ನು ಎಲ್ಲರೂ ನೋಡಿದ್ದಾರೆ. ಇದನ್ನು ಯಾವ ರೀತಿಯಾಗಿ ಬಿಟ್ಟರೂ ಮಾ ಕಳ್ಳತನಕ್ಕೆ ಆಸ್ಪತ್ರೆ. ಇದನ್ನು ಜಿಲ್ಲಾಸ್ಪತ್ರೆಯಿಂದ ಪರಿವೀಕ್ಷಣೆಗೆ ಮಾಡಿದ್ದೇವೆ. ಇದರ ಸ ಕಲಸಗಳು ಆಗಬೇಕು. ಇದರ [illegible] ಮಾಡುವುದಕ್ಕೆ ಆಗುತ್ತಾ ಇಲ್ಲ. ಇದು ಆ [illegible] ಇದೆ. ಇದರ [illegible] ಮೂಲಕಾರಣ ಪತ್ತೆಹಚ್ಚುವುದರ ಬಗ್ಗೆಯೂ

ಪರ್ಕಾಮಾನಗಳು ಬರುತ್ತಿರುತ್ತವೆ. ರಾಜ್ಯಾದ್ಯಂತ ಸರ್ಕಾರ ಆ ಕಡೆ ಗಮನಹರಿಸಿ ಆಸ್ಪತ್ರೆಯನ್ನು ಮೇಲಪ್ಪಿಸಿಕ್ಕೆ ತಕ್ಕಮಂತಹ ವಿಚಾರವನ್ನು ಮಾಡಬೇಕು ಅಥವಾ ಸರ್ಕಾರವೇ ಅದನ್ನು ಪಕ್ಕಕ್ಕೆ ತೆಗೆದುಕೊಂಡು ಅದನ್ನು ರಿಪೇರಿ ಮಾಡುವಂತಹ ಕೆಲಸ ಮಾಡಬೇಕು. ಏಕೆಂದರೆ ಅದು ಅತ್ಯಾವಶ್ಯಕವಾದಂತಹ ಆಸ್ಪತ್ರೆ. ಅಂತಹ ಆಸ್ಪತ್ರೆ ಬಾವುಗೆ ಜಿಲ್ಲೆಯಲ್ಲಿ ಇಲ್ಲದೇ ಇರುವಂತಹ ಒಂದು ಮಾದರಿ ಕಟ್ಟಡ ಕಟ್ಟಿದ್ದಾರೆ. ಆ ಆಸ್ಪತ್ರೆಯನ್ನು ಉಳಿಸಿಕೊಳ್ಳುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ತಮ್ಮ ಸಲಹೆಯನ್ನು ನಾನು ಒಪ್ಪುತ್ತೇನೆ. ಈಗಲೇ ಸರ್ಕಾರದ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ.

ಅಧ್ಯಕ್ಷರು : ನೀವು ರಾಜ್ಯಕ್ಕೆ ಹೇಳಿದಿರಿ, ಆದರೆ ನೀವು ಕೇವಲ ಎಲ್ಲಾ ಪ್ರಶ್ನೆಗಳನ್ನು ಸಕಲೇಶಪುರಕ್ಕೆ ಸಂಬಂಧಪಟ್ಟ ಹಾಗೆ ಕೇಳುತ್ತೀರಿ. ನೀವು ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಕೇಳುತ್ತಿಲ್ಲ. ನಾವು ನಿಮ್ಮ ಮೇಲೆ ಕಂಪ್ಲೇಂಟ್ ಮಾಡಬೇಕೆಂದು ಇದ್ದೇವೆ.

ಶ್ರೀ ಬಿ.ಬಿ. ಶಿವಪ್ಪ : ನನ್ನ ಮೊದಲನೆ ಆದ್ಯತೆ ನಾನು ಆರಿಸಿಬಂದಿರತಕ್ಕಂಥ ಕ್ಷೇತ್ರಕ್ಕೆ. ಎರಡನೇ ಆದ್ಯತೆ ರಾಜ್ಯಕ್ಕೆ. ಏಕೆಂದರೆ ಕ್ಷೇತ್ರದ ಜನ ನಮ್ಮ ಕ್ಷೇತ್ರದ ಬಗ್ಗೆ ನಮ್ಮ ಶಾಸಕರು ಏನು ಮಾಡಿದ್ದಾರೆ ಎಂದು ಕಾಯುತ್ತಿರುತ್ತಾರೆ.

ಮಂಗಳೂರು ಕ್ರೀಡಾಂಗಣ ಕುರಿತು

155 - ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ? ಯೋಜನೆಗಳೇನು?

ಆ) ಜಿಲ್ಲಾ ಕೇಂದ್ರಗಳಲ್ಲಿರುವ [illegible] ಅವ್ಯವಸ್ಥೆ ಹಾಗೂ ಮುರಕ್ಕೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಮಂಗಳೂರಿನಲ್ಲಿರುವ ಮಂಗಳಾ [illegible] ಕೈಗೊಂಡಿದೆಯೇ? ಹಾಗಿದ್ದಲ್ಲಿ ಸರ್ಕಾರವು [illegible]

ಈ) ಜಿಲ್ಲಾಮಟ್ಟದ ಕ್ರೀಡಾಂಗಣ ಮಂಗಳೂರಿನಲ್ಲಿ [illegible] ಕ್ರೀಡಾಂಗಣ ಕೈಗೊಳ್ಳಲಾಗಿದೆ ಎಷ್ಟು ಅನುದಾನ ಬಿಡುಗಡೆ?

ಉ) ಮಂಗಳೂರಿನಲ್ಲಿ ಈಜುಕೊಳವನ್ನು [illegible] ನಿರ್ಮಿಸಲು ಸರ್ಕಾರ ಯೋಚಿಸಿದೆಯೆ?